154(373) ಶ್ರೀ ಬಾಲರಾಜ್ ಎಸ್ (ಕೊಳ್ಳೇಗಾಲ)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕೊಳ್ಳೇಗಾಲ ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆಗೆ ಹೆಚ್ಚುವರಿ ತಜ್ಞ ವೈದ್ಯರುಗಳನ್ನು ಮಂಜೂರು ಮಾಡಿದ್ದು ಈ ಸಾಲಿನಲ್ಲಿಯೇ ವೈದ್ಯರುಗಳನ್ನು ನೇಮಕ ಮಾಡಲಾಗುವುದೇ?

ಆ) ಈ ಆಸ್ಪತ್ರೆಯಲ್ಲಿ ಬ್ಲಡ್ ಬ್ಯಾಂಕ್ ತೆರೆಯುವ ಬಗ್ಗೆ ಆಗಿಂದಾಗ್ಗೆ ಕೋರಿಕೆ ಸಲ್ಲಿಸಿದ್ದಾಗ್ಯೂ ಈ ಪ್ರಸ್ತಾವನೆಯು ನೆನೆಗುದಿಗೆ ಬೀಳಲು ಕಾರಣಗಳೇನು?

ಇ) ಪ್ರಸಕ್ತ ಸಾಲಿನಲ್ಲಾದರೂ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಆರ್ ಅಶೋಕ್:

ಅ) ಕೊಳ್ಳೇಗಾಲ ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆಗೆ ಹೆಚ್ಚುವರಿಯಾಗಿ 7 ತಜ್ಞರ ಹುದ್ದೆಗಳನ್ನು ಮಂಜೂರು ಮಾಡಲಾಗಿದೆ. ಆಸ್ಪತ್ರೆಯ ಕಟ್ಟಡ ಕಾಮಗಾರಿಗಳು ಶೇಕಡ 60% ರಷ್ಟು ಪೂರ್ಣಗೊಂಡ ನಂತರ ಈ ತಜ್ಞ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದು.

ಆ) ಈ ಆಸ್ಪತ್ರೆಯಲ್ಲಿ ಮೊದಲನೇ ಹಂತದಲ್ಲಿ ಬ್ಲಡ್ ಸ್ಟೋರೇಜ್ ವಿಭಾಗವನ್ನು ತೆರೆಯಲು ಕ್ರಮ ಕೈಗೊಳ್ಳಲಾಗುತ್ತಿದೆ. ಅದಕ್ಕೆ ಸಂಬಂದಿಸಿದಂತೆ ಸಿವಿಲ್ ಕಾಮಗಾರಿಗಳು ಮುಗಿದಿರುತ್ತವೆ. ಅದಕ್ಕೆ ಸಂಬಂಧ ಪಟ್ಟ ಉಪಕರಣಗಳಾದ ಮೈಕ್ರೋಸ್ಕೋಪ್, ಓವನ್, ರೆಫ್ರಿಜರೇಟರ್‌ಗಳನ್ನು ನೀಡಲಾಗಿದೆ. ಡ್ರಗ್ ಕಂಟ್ರೋಲರ್ ವತಿಯಿಂದ ತಪಾಸಣೆ ಮಾಡಿಸಿ ಲೈಸೆನ್ಸ್ ಪಡೆದ ನಂತರ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಇ) ಬ್ಲಡ್ ಸ್ಟೋರೇಜ್ ವಿಭಾಗ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತದೆ.